ದಿನಾಂಕಃ 26-05-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಆರೋಪಿ 2 ಮತ್ತು 4 ರವರ ಪರ ವಕೀಲರಾದ ಶ್ರೀ. ಕೆ. ವಿ. ಎ. ವಕೀಲರಿಂದಃ

ದೂರಿನಲ್ಲಿ ನಾನು ಸಹಿ ಹಾಕಿದ್ದು , ಆದರೆ ಅದರಲ್ಲಿ ಏನೇನೂ ಬರೆದಿರುತ್ತಾರೆ ಅಂತಾ ಗೊತ್ತಿರುವುದಿಲ್ಲ. ದೂರನ್ನು ಕೈಯಲ್ಲಿ ಬರವಣಿಗೆ ಮಾಡಿರುವುದು ಅಥವಾ ಕೈಯಲ್ಲಿ ಬೆರಳಚ್ಚು ಪಡಿಸಿರುವುದು ಅಂತಾ ಗೊತ್ತಿರುವುದಿಲ್ಲ. ಅದನ್ನು ಯಾರು ತಯಾರು ಮಾಡಿಕೊಂಡು ಬಂದಿರುತ್ತಾರೆ ಅಂತಾ ಗೊತ್ತಿರುವುದಿಲ್ಲ. 2 ಮತ್ತು 4 ನೇ ಆರೋಪಿರು ಪ್ರಕರಣಕ್ಕೆ ಹಾಜರಾದಾಗಲೇ ಗೊತ್ತಾಗಿದ್ದು , ಅದಕ್ಕಿಂತ ಮುಂಚೆ ಗೊತ್ತಿರಲಿಲ್ಲ ಎಂದರೆ ಸರಿ. ಅವರ ಕುಟುಂಬದ ಬಗ್ಗೆ ನಿಮಗೆ ಗೊತ್ತಿರುವುದಿಲ್ಲ. ನಿಮ್ಮ ಕುಟುಂಬದ ಬಗ್ಗೆ ಅವರಿಗೆ ಗೊತ್ತಿರುವುದಿಲ್ಲ ಎಂದರ ಸರಿ. 2 ಮತ್ತು 4 ನೇ ಆರೋಪಿಯರದ್ದು ಬೇರೆ ಬೇರೆ ಊರು ಎಂದರೆ ಸರಿ. ಪಟೇಲ್ ವೆಂಕಟರಾಯಪ್ಪ ನವರು 2 ಮತ್ತು 4 ನೇ ಆರೋಪಿತರಿಗೆ ಗೊತ್ತಿರುವುದಿಲ್ಲ ಎಂದರೆ ಅದು ಅವರಿಗೆ ಗೊತ್ತಿದೆಯೇ ಇಲ್ಲವೋ ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿ ಪಟೇಲ್ ವೆಂಕಟರಾಯಪ್ಪ ಎಂದು ತಿಳಿದು ಆಸ್ತಿಯನ್ನು 2 ಮತ್ತು 4 ನೇ ಆರೋಪಿತರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದೂರು ನೀಡುವಾಗಲೂ 2 ಮತ್ತು 4 ನೇ ಆರೋಪಿತರು ಏನು ಮಾಡಿರುತ್ತಾರೆ ಅಂತಾ ನನಗೆ ಗೊತ್ತಿರುವುದಿಲ್ಲ. ಚಾಸಾ 2, 3, 5 ಮತ್ತು 6 ರವರಿಗೂ ಕೂಡ 2 ಮತ್ತು 4 ನೇ ಆರೋಪಿತರು ಗೊತ್ತಿರುವುದಿಲ್ಲ ಎಂದರೆ ಗೊತ್ತಿಲ್ಲ. 2 ಮತ್ತು 4 ನೇ ಆರೋಪಿತರು ಉದ್ದೇಶಪೂರ್ವಕವಾಗಿ ನಿಮ್ಮ ಕುಟುಂಬದ ಬಗ್ಗೆ ಗೊತ್ತಿದ್ದು ಯಾವುದೇ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿ. 2 ಮತ್ತು 4 ನೇ ಆರೋಪಿತರಿಗೆ ಮೋಸ ಮಾಡುವ ಉದ್ದೇಶದಿಂದ ಯಾವುದೇ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿ ಎಂದು ಖರೀದಿ ಮಾಡಿರಲಿಲ್ಲ ಎಂದು ನುಡಿಯುತ್ತಾರೆ.

ನೊಂದಣಿ ಪತ್ರ ಆಗಿರುವ ವಿಚಾರ 2013 ನೇ ಇಸವಿಯಲ್ಲಿ ಗೊತ್ತಾಗಿರುತ್ತದೆ. 2 ಮತ್ತು 4 ನೇ ಆರೋಪಿತರು ನಿಮ್ಮ ದೂರಿನಲ್ಲಿ ಹೇಳಿರುವಂತೆ ಯಾವುದೇ ರೀತಿ

ಶಾಮಿೀಲಾಗಿಲ್ಲ ಎಂದರೆ ಸಅದರ ಬಗ್ಗೆ ನಾನು ಹೇಳಿರುವುದಿಲ್ಲ. ಶಾಮೀಲಾಗಿರುವ ಬಗ್ಗೆ ದೂರನ್ನು ಕೊಟ್ಟಿರುತ್ತೀರಾ ಎಂದರೆ ಅದರ ಬಗ್ಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ.

1 ನೇ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲು ಯಾವುದೇ ಸಕಾರಣ ಇಲ್ಲದೆ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

ಪಿ.ಡಬ್ಲ್ಯೂ:1 ಸಿ. ಸಿ.ನಂ. /20

ದಿನಾಂಕಃ 26-05-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ಎಸ್ ಎಂ. ವಕೀಲರಿಂದಃ

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

Accused absent, EP filed perused allowed, exempted for the day. Complainant present examined as pw1 earlier sworn statement adopted. chief examination of the PW1. got marked ExP1 to 6. ExP1(a). 6(a).

For cross of pw1.

Call on 21-03-2023.

**Prl. Civil Judge & JMFC.,**
**Chintamani**